**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ:ಕವಿಪ/ಆಡಳತ-1/64/ವೃಮತ್ತುನೇ/2021, ಬೆಂಗಳೂರು-560 001, ದಿನಾಂಕ:30.11.2021**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ ಸಂಖ್ಯೆ:14) ರ 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ, 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಮಂಡಳಿಯು, ರಚಿಸಲು ಉದ್ದೇಶಿಸಿರುವ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ (ಅಧಿಕಾರಿಗಳು ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021 ರ ಕರಡನ್ನು, ಸದರಿ ಅಧಿನಿಯಮದ 3ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ, ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳ ಮಾಹಿತಿಗಾಗಿ ದಿನಾಂಕ:30.11.2021 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಆಂಗ್ಲ ಭಾಷೆಯಲ್ಲಿ ಹೊರಡಿಸಿ **ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಸೂಚಿಸಲಾಗಿದೆ.**

ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ:29.12.2021ರೊಳಗಾಗಿ ಯಾರೇ ವ್ಯಕ್ತಿಯಿಂದ ಮಂಡಳಿಯು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಮಂಡಳಿಯು ಪರಿಗಣಿಸುತ್ತದೆ. ಹೀಗಾಗಿ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಕೊಠಡಿ ಸಂಖ್ಯೆ:156-ಸಿ, ವಿಧಾನ ಸೌಧ, ಬೆಂಗಳೂರು-560 001 ಇವರಿಗೆ ಸಲ್ಲಿಸಬಹುದು.

## ಕರಡು ನಿಯಮಗಳು

1. **ಹೆಸರು ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, (ಅಧಿಕಾರಿಗಳು ಮತ್ತು ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2021 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:-** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:-

(i) "ನೇಮಕಾತಿ ಪ್ರಾಧಿಕಾರ" ಎಂದರೆ, ನಿಯಮ 6 ರಲ್ಲಿ ನಿರ್ದಿಷ್ಟಪಡಿಸಲಾದಂತೆ ವಿವಿಧ ಹುದ್ದೆಗಳ ನೇಮಕಾತಿಯನ್ನು ಮಾಡುವ ಸಕ್ಷಮ ಪ್ರಾಧಿಕಾರ

(ii) "ಪರಿಷತ್ತು" ಎಂದರೆ, ಕರ್ನಾಟಕ ವಿಧಾನ ಪರಿಷತ್ತು;

(iii) "ವಿಧಾನ ಪರಿಷತ್ತು" ಎಂದರೆ, ಕರ್ನಾಟಕ ರಾಜ್ಯದ ವಿಧಾನ ಪರಿಷತ್ತು;

(iv) "ವಿಧಾನ ಪರಿಷತ್ತಿನ ಸಚಿವಾಲಯ" ಎಂದರೆ, ನಿಯಮ 3 ರ ಉಪ-ನಿಯಮ (1) ರಲ್ಲಿ ನಿರ್ದಿಷ್ಟಪಡಿಸಲಾದ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ;

(v) "ಸಭಾಪತಿ" ಎಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಮತ್ತು ಸಭಾಪತಿಯವರ ಹುದ್ದೆ ಖಾಲಿಯಿರುವಾಗ, ಭಾರತ ಸಂವಿಧಾನದ ಅನುಚ್ಛೇದ 184(1)ರ ಮೇರೆಗೆ ಸಭಾಪತಿಯವರ ಪದದ ಕರ್ತವ್ಯಗಳನ್ನು ನಿರ್ವಹಿಸುವ ಉಪ ಸಭಾಪತಿಯವರನ್ನು ಒಳಗೊಂಡಿರತಕ್ಕದ್ದು;

(vi) ಸಂಸದೀಯ ಪದಾಧಿಕಾರಿಗಳೆಂದರೆ –

(ಎ) ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳು,

(ಬಿ) ಕರ್ನಾಟಕ ವಿಧಾನ ಪರಿಷತ್ತಿನ ಉಪ-ಸಭಾಪತಿಗಳು,

(ಸಿ) ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ಮತ್ತು

(ಡಿ) ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರು,

(ಇ) ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರು

(vii) "ಕಾರ್ಯದರ್ಶಿ" ಎಂದರೆ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಕಾರ್ಯದರ್ಶಿ;

(viii) "ಅನುಸೂಚಿ" ಎಂದರೆ, ಈ ನಿಯಮಗಳಿಗೆ ಅನುಬಂಧಿಸಲಾದ ಅನುಸೂಚಿ;

(ix) "ವಿಶೇಷ ಮಂಡಳಿ" ಎಂದರೆ, ಮುಖ್ಯಮಂತ್ರಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಮತ್ತು ಹಣಕಾಸು ಸಚಿವರು, ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಗಳನ್ನೊಳಗೊಂಡ ಮಂಡಳಿ, ವಿಶೇಷ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ಮುಖ್ಯಮಂತ್ರಿಯವರು ವಹಿಸತಕ್ಕದ್ದು.

**ಸೂಚನೆ:-** ಇದರಲ್ಲಿ ಪರಿಭಾಷಿಸಿಲ್ಲದ ಯಾವುದೇ ಪದಗಳು, ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಲ್ಲಿ ಪರಿಭಾಷಿಸಿದ ಅಥವಾ ರಾಜ್ಯದ ಸರ್ಕಾರಿ ನೌಕರರ ಸೇವಾ ಷರತ್ತುಗಳನ್ನು ನಿಯಂತ್ರಿಸುವ ಕರ್ನಾಟಕ ಸಿವಿಲ್ ಸೇವಾ ಅಧಿನಿಯಮ, 1978 ಅಥವಾ ಯಾವುದೇ ಇತರೆ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಲ್ಲಿ ಪರಿಭಾಷಿಸಲಾದಂಥದ್ದೇ ಅರ್ಥವನ್ನು ಹೊಂದಿರತಕ್ಕದ್ದು.

3. **ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ:-**

(1) ಕರ್ನಾಟಕ ವಿಧಾನ ಪರಿಷತ್ತಿಗೆ ಸಂಬಂಧಿಸಿದಂತೆ "ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ" ಎಂಬ ಹೆಸರಿನ ಒಂದು ಸಚಿವಾಲಯ ಇರತಕ್ಕದ್ದು. ಇದು

i) ಶಾಸಕರ ಭವನದ ಸಿಬ್ಬಂದಿ,

(ii) ಸಂಸದೀಯ ಪದಾಧಿಕಾರಿಗಳ ಆಪ್ತ ಸಿಬ್ಬಂದಿ

ii) ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಲಾದಂತೆ ಗ್ರೂಪ್ 'ಎ' 'ಬಿ' 'ಸಿ' ಮತ್ತು 'ಡಿ' ಗೆ ಸೇರಿದ ಅಧಿಕಾರಿಗಳು ಮತ್ತು ನೌಕರರುಗಳನ್ನೊಳಗೊಂಡ ಆಡಳಿತ ಸಿಬ್ಬಂದಿ.

-ಇವರುಗಳನ್ನು ಒಳಗೊಂಡಿರತಕ್ಕದ್ದು.

4. **ಹುದ್ದೆಗಳ ಸೃಜನೆ:-**

(i) ವಿಶೇಷ ಮಂಡಳಿಯು ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಕಾರ್ಯದರ್ಶಿ, ಅಪರ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿ ವೃಂದದ ಹುದ್ದೆಗಳನ್ನು ಸೃಜಿಸಬಹುದು, ರದ್ದುಗೊಳಿಸಬಹುದು, ಮೇಲ್ದರ್ಜೆಗೇರಿಸಬಹುದು, ಕೆಳದರ್ಜೆಗಿಳಿಸಬಹುದು, ಮರುಪದನಾಮೀಕರಣಗೊಳಿಸಬಹುದು ಮತ್ತು ನೇಮಕಾತಿ ವಿಧಾನವನ್ನು ಮಾರ್ಪಾಡುಗೊಳಿಸಬಹುದು.

(ii) ವಿಶೇಷ ಮಂಡಳಿಯು, ಅನುಸೂಚಿ-I ಮತ್ತು II ರಲ್ಲಿ ನಿರ್ದಿಷ್ಟಪಡಿಸಲಾದ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿತಗೊಳಿಸುವ ಅಥವಾ ಅದಕ್ಕೆ ಹುದ್ದೆಗಳ ಯಾವುದೇ ಹೊಸ ಪ್ರವರ್ಗವನ್ನು ಸೇರಿಸುವ ಅಥವಾ ಇತರೆ ಯಾವುದೇ ರೀತಿಯಲ್ಲಿ ಅನುಸೂಚಿ – I ಮತ್ತು II ಅನ್ನು ತಿದ್ದುಪಡಿ ಮಾಡಬಹುದು;

(iii) ಸಭಾಪತಿಗಳು, ವಿಶೇಷ ಮಂಡಳಿಯ ಅನುಮೋದನೆ ಪಡೆಯದೆ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಗ್ರೂಪ್-ಬಿ, ಸಿ ಮತ್ತು ಡಿ ಹುದ್ದೆಗಳನ್ನು ಸೃಜಿಸಬಹುದು, ರದ್ದುಗೊಳಿಸಬಹುದು, ಮೇಲ್ದರ್ಜೆಗೇರಿಸಬಹುದು/ ಕೆಳದರ್ಜೆಗಿಳಿಸಬಹುದು/ಮರುಪದನಾಮೀಕರಣಗೊಳಿಸಬಹುದು ಮತ್ತು ನೇಮಕಾತಿಯ ವಿಧಾನವನ್ನು ಮಾರ್ಪಾಡುಗೊಳಿಸಬಹುದು.

(iv) ಆರ್ಥಿಕ ಇಲಾಖೆ, ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗಳೊಂದಿಗೆ ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳಲ್ಲಿನ ಪ್ರಮುಖ ಬದಲಾವಣೆಗಳ ಸಂದರ್ಭಗಳಲ್ಲಿ ಅಥವಾ ಸಿವಿಲ್ ಸೇವಾ

ಅಧಿನಿಯಮಗಳು, 1978ರ ಅಡಿಯಲ್ಲಿ ರಚಿಸಲಾದ ಅಧಿನಿಯಮ ಮತ್ತು ನಿಯಮಗಳ ಅರ್ಥವಿವರಣೆ ಸಂದರ್ಭಗಳಲ್ಲಿ ಸಮಾಲೋಚಿಸತಕ್ಕದ್ದು.

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಆಡಳಿತ:-**

(i) ಈ ನಿಯಮಗಳ ಉಪಬಂಧಗಳಿಗೊಳಪಟ್ಟು, ಸಭಾಪತಿಯವರು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತದ ಮೇಲೆ ಸಂಪೂರ್ಣ ನಿಯಂತ್ರಣವನ್ನು ಹೊಂದಿರತಕ್ಕದ್ದು.

(ii) ಸಭಾಪತಿಯವರು, ಕಾರ್ಯದರ್ಶಿಗೆ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲಕ್ಕೆ ಮತ್ತು ಅಂತಹ ಷರತ್ತುಗಳಿಗೆ ಒಳಪಟ್ಟು, ಅಂತಹ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು;

(iii) ಕಾರ್ಯದರ್ಶಿಯವರು, ಸಭಾಪತಿಗಳ ಅನುಮೋದನೆಯೊಂದಿಗೆ ತಮ್ಮ ಅಧೀನ ಅಧಿಕಾರಿಗಳಿಗೆ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ತಮ್ಮ ಅಂತಹ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು;

**6. ನೇಮಕಾತಿ ಪ್ರಾಧಿಕಾರಗಳು:-**

(i) ವಿಶೇಷ ಮಂಡಳಿಯು ಕಾರ್ಯದರ್ಶಿ, ಅಪರ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿ ವೃಂದಗಳ ಸಂಬಂಧದಲ್ಲಿ ನೇಮಕಾತಿ ಪ್ರಾಧಿಕಾರವಾಗಿರತಕ್ಕದ್ದು. ನಿಯಮ 3 ರ ಮೂಲಕ ನೇಮಕಾತಿ ವಿಧಾನವನ್ನು ಉಪಬಂಧಿಸದ ಯಾವುದೇ ನಿರ್ದಿಷ್ಟ ಪ್ರಕರಣವನ್ನು ವಿಶೇಷ ಮಂಡಳಿಯು ನಿರ್ಧರಿಸತಕ್ಕದ್ದು.

(ii) ಸಭಾಪತಿಯವರು ಕಾರ್ಯದರ್ಶಿ, ಅಪರ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಹುದ್ದೆಗಳನ್ನು ಹೊರತುಪಡಿಸಿದ, ಗ್ರೂಪ್-ಎ ಹುದ್ದೆಗಳು ಮತ್ತು ಗ್ರೂಪ್ 'ಬಿ' 'ಸಿ ಮತ್ತು 'ಡಿ' ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರವಾಗಿತಕ್ಕದ್ದು. ನಿಯಮ 3ರ ಮೂಲಕ ಉಪಬಂಧಿಸದ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ನೇಮಕಾತಿ ವಿಧಾನವನ್ನು ಸಭಾಪತಿಯವರೇ ನಿರ್ಧರಿಸತಕ್ಕದ್ದು.

(iii) ಸಭಾಪತಿಯವರು ಆಡಳಿತದ ದೃಷ್ಟಿಯಿಂದ ಅವಶ್ಯಕವಿರುವಾಗಲೆಲ್ಲಾ, ರಾಜ್ಯ ಬೊಕ್ಕಸಕ್ಕೆ ಹೆಚ್ಚುವರಿ ಆರ್ಥಿಕ ಹೊರೆಯನ್ನುಂಟುಮಾಡದೇ, ಉಪ ಕಾರ್ಯದರ್ಶಿ ಶ್ರೇಣಿಯವರೆಗಿನ, ಅನುಸೂಚಿ-I ಮತ್ತು II ರಲ್ಲಿನ ಸಮಾನಾಂತರ ವೇತನ ಶ್ರೇಣಿಯ ಹುದ್ದೆಗಳನ್ನು ಮರುಪದನಾಮೀಕರಣಗೊಳಿಸಬಹುದು ಅಥವಾ ಪರಿವರ್ತಿಸಬಹುದು.

(iv) ಕಾರ್ಯದರ್ಶಿಯವರು, ವಿಧಾನ ಪರಿಷತ್ತಿನ ಅಧಿವೇಶನದ ಅವಧಿಯಲ್ಲಿ, ಸದರಿ ಅಧಿವೇಶನ ಪ್ರಾರಂಭವಾಗುವ ಎರಡು ದಿನಗಳ ಮುಂಚಿತವಾಗಿ ಮತ್ತು ಸದರಿ ಅಧಿವೇಶನ ಮುಕ್ತಾಯಗೊಂಡ ನಂತರದ ಎರಡು ದಿನಗಳವರೆಗೆ ವಿಧಾನ ಪರಿಷತ್ತಿನ ಸದಸ್ಯರಿಗೆ ಸಚಿವಾಲಯ ನೆರವು ನೀಡಲು ಆರು ತಾತ್ಕಾಲಿಕ ಶೀಘ್ರಲಿಪಿಗಾರರನ್ನು ಮತ್ತು ವಿಧಾನ ಪರಿಷತ್ತಿನ ಮಹಿಳಾ ಸದಸ್ಯರ ಸೌಕರ್ಯಕ್ಕಾಗಿ ಸ್ಥಳದಲ್ಲೇ ಉಪಸ್ಥಿತರಿರುವಂತೆ ಆರು ತಾತ್ಕಾಲಿಕ ಮಹಿಳಾ ದಲಾಯತ್‌ಗಳನ್ನು ನೇಮಿಸಬಹುದು.

(v) ವಿಧಾನ ಪರಿಷತ್ತಿನ ಅಧಿವೇಶನದ ಅವಧಿಯಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಹೆಚ್ಚುವರಿಯಾದ ಕಾರ್ಯವನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಕಾರ್ಯದರ್ಶಿಯವರು, ಅಧಿವೇಶನ ಪ್ರಾಂಭವಾಗುವ 15 ದಿನಗಳ ಮುಂಚಿತವಾಗಿ ಮತ್ತು ಮುಕ್ತಾಯಗೊಂಡ ನಂತರದ ಎರಡು ದಿನಗಳವರೆಗೆ ಮೂವರು ತಾತ್ಕಾಲಿಕ ಬೆರಳಚ್ಚುಗಾರರನ್ನು ಮತ್ತು ಒಬ್ಬ ಗ್ರೂಪ್ "ಡಿ" ನೌಕರರುಗಳನ್ನು ಅಂತಹ ಹುದ್ದೆಗಳಿಗೆ ನಿಗದಿಪಡಿಸಲಾದ ದರ್ಜೆಯಲ್ಲಿ ಅವುಗಳಿಗೆ ಅನುಮತಿಸಬಹುದಾದ ಭತ್ಯೆಗಳೊಂದಿಗೆ, ನೇಮಕ ಮಾಡಿಕೊಳ್ಳಲು ಸಕ್ಷಮರಾಗಿರತಕ್ಕದ್ದು.

**7. ನೇಮಕಾತಿಗಳು:-**

ಅನುಸೂಚಿ–I ರಲ್ಲಿನ ವೃಂದಗಳಲ್ಲಿನ ವಿವಿಧ ಹುದ್ದೆಗಳಿಗೆ ನೇಮಕಾತಿಗಳನ್ನು ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಿದ ನೇಮಕಾತಿಯ ವಿಧಾನ ಮತ್ತು ವಿದ್ಯಾರ್ಹತೆಗೆ ಅನುಗುಣವಾಗಿ ಮಾಡತಕ್ಕದ್ದು. ನೇಮಕಾತಿಯ ವಿಧಾನವು ಈ ಕೆಳಗೆ ನಿರ್ದಿಷ್ಟಪಡಿಸಿದ ಯಾವುದೇ ರೀತಿಯಲ್ಲಿ ಅಂದರೆ,-

(i) ಈ ನಿಯಮಗಳಲ್ಲಿ ನಿಯಮಿಸಲಾದ ಕಾರ್ಯವಿಧಾನಕ್ಕೆ ಅನಗುಣವಾಗಿ ನೇರ ನೇಮಕಾತಿ ಮೂಲಕ;

(ii) ಈ ನಿಯಮಗಳ ಅನುಸೂಚಿ–II ರಲ್ಲಿ ನಿರ್ದಿಷ್ಟಪಡಿಸಲಾದ ಹುದ್ದೆಗಳಿಗೆ ಈ ನಿಯಮಗಳಲ್ಲಿ ನಿಯಮಿಸಲಾದ ಕಾರ್ಯವಿಧಾನಕ್ಕೆ ಅನುಗುಣವಾಗಿ ಮುಂಬಡ್ತಿ ಮೂಲಕ;

(iii) ಪ್ರತಿನಿಯೋಜನೆಯ ಮೂಲಕ

(iv) ಗುತ್ತಿಗೆ ಮತ್ತು ಹೊರಗುತ್ತಿಗೆ ಮೂಲಕ ಇರತಕ್ಕದ್ದು; ನೇಮಕಾತಿಗಳನ್ನು ಆರ್ಥಿಕ ಇಲಾಖೆ ಮತ್ತು ಕಾರ್ಮಿಕ ಇಲಾಖೆಯಿಂದ ನಿರ್ದಿಷ್ಟಪಡಿಸಿದಂಥ ನಿಬಂಧನೆಗಳು ಮತ್ತು ಷರತ್ತುಗಳೊಂದಿಗೆ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ಯಾವುದೇ ಇತರೆ ಸೂಚನೆಗಳೊಂದಿಗೆ ರಾಜ್ಯ ಸರ್ಕಾರದ ಕಾರ್ಯನೀತಿಯ ಪ್ರಕಾರ ಮಾಡತಕ್ಕದ್ದು.

8. **ಮೀಸಲಾತಿ:-**

ನೇರ ನೇಮಕಾತಿ (ಲಂಬಾಂತರ ಮತ್ತು ಸಮಾನಾಂತರ ಮೀಸಲಾತಿ) ಮತ್ತು ಮುಂಬಡ್ತಿಗಳಲ್ಲಿ ಮೀಸಲಾತಿ ನೀತಿಯು ರಾಜ್ಯದ ಕಾರ್ಯನೀತಿಯನ್ನೇ ಅನುಸರಿಸತಕ್ಕದ್ದು; ಅಂತೆಯೇ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದಂತೆ ಅನುಚ್ಛೇಧ 371 (ಜೆ) ಉಪಬಂಧಗಳನ್ನು ನೇರ ನೇಮಕಾತಿ ಮತ್ತು ಮುಂಬಡ್ತಿಗಳಲ್ಲಿಯೂ ಸಹ ಅನುಸರಿಸತಕ್ಕದ್ದು. ಹೈದರಾಬಾದ್-ಕರ್ನಾಟಕ ವೃಂದಗಳಿಗಾಗಿ ಮತ್ತು ಉಳಿಕೆ ವೃಂದಗಳಿಗಾಗಿ ಪ್ರತ್ಯೇಕ ಜ್ಯೇಷ್ಠತಾ ಪಟ್ಟಿಗಳು ಇರತಕ್ಕದ್ದು.

9. **ನೇರ ನೇಮಕಾತಿಗೆ ಸಂಬಂಧಿಸಿದ ಕಾರ್ಯವಿಧಾನ:-**

ಹುದ್ದೆಗಳ ಯಾವುದೇ ಪ್ರವರ್ಗಕ್ಕೆ ನೇರ ನೇಮಕಾತಿ ಮಾಡುವ ಸಂದರ್ಭದಲ್ಲಿ ಕಾರ್ಯದರ್ಶಿಯವರು ಸಭಾಪತಿಯವರ ಅನುಮೋದನೆಯೊಂದಿಗೆ ನಿಯಮಿಸಲಾದ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು ಮತ್ತು ಸಭಾಪತಿಯವರು ಯುಕ್ತವೆಂದು ಭಾವಿಸಬಹುದಾದಂತೆ ಲಿಖಿತ ಪರೀಕ್ಷೆ ಅಥವಾ ಸಂದರ್ಶನ ಅಥವಾ ಇವೆರಡೂ ಪರೀಕ್ಷೆಗಳ ತರುವಾಯ ನೇಮಕಾತಿಗೆ ಹೆಚ್ಚು ಸೂಕ್ತವೆನಿಸುವ ನಿಯಮಿಸಲಾದ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

ಪರಂತು, ಗ್ರೂಪ್-ಬಿ ಮತ್ತು ಗ್ರೂಪ್-ಸಿಯ ಹುದ್ದೆಗೆ ನೇರ ನೇಮಕಾತಿಯ ಆಯ್ಕೆಯನ್ನು ಸಭಾಪತಿಗಳು, ನಿರ್ಧರಿಸಬಹುದಾದಂಥ ಅರ್ಹತಾ ಪರೀಕ್ಷೆ ಅಥವಾ ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಪಡೆದುಕೊಂಡ ಅಂಕಗಳ ಆಧಾರದ ಮೇಲೆ ಮಾಡತಕ್ಕದ್ದು. ಗ್ರೂಪ್-ಡಿ ಹುದ್ದೆಯ ಆಯ್ಕೆಗೆ ಯಾವುದೇ ಸಂದರ್ಶನ ಇರತಕ್ಕದ್ದಲ್ಲ.

ಸಭಾಪತಿಗಳು ನೇಮಕಾತಿಯ ಸಮಯದಲ್ಲಿ ನೇರನೇಮಕಾತಿಗಳನ್ನು ಮಾಡಲು ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು ಮತ್ತು ನೇಮಕಾತಿಯ ವಿಧಾನ, ಆಯ್ಕೆಯ ಪ್ರಕ್ರಿಯೆ, ಅರ್ಹತಾ ಪಟ್ಟಿಯ ಸಿದ್ಧತೆ ಮತ್ತು ಇತರೆ ಮಾನದಂಡಗಳು ಅಧಿಸೂಚನೆಯ ಮೂಲಕ ಸಭಾಪತಿಯವರು ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

ಪರಂತು, ಖಾಲಿಹುದ್ದೆಗಳನ್ನು ಈ ನಿಯಮಕ್ಕೆ ಅನುಸಾರವಾಗಿ ಸಿದ್ಧಪಡಿಸಲಾದ ಅಭ್ಯರ್ಥಿಗಳ ಅನುಮೋದಿತ ಪಟ್ಟಿಗಳಿಂದ ಸಭಾಪತಿಗಳು ಭರ್ತಿ ಮಾಡಬಹುದು. ಈ ಸಂದರ್ಭದಲ್ಲಿ ಸಭಾಪತಿಗಳ ನಿರ್ಧಾರವೇ ಅಂತಿಮವಾಗಿರತಕ್ಕದ್ದು.

10. **ಮುಂಬಡ್ತಿಗೆ ಸಂಬಂಧಿಸಿದ ಕಾರ್ಯವಿಧಾನ:-**

ಕಾರ್ಯದರ್ಶಿಯವರ ಹುದ್ದೆಯನ್ನು ಹೊರತುಪಡಿಸಿ ಎಲ್ಲಾ ಮುಂಬಡ್ತಿಗಳನ್ನು ಜ್ಯೇಷ್ಠತೆ ಮತ್ತು ಅರ್ಹತೆಯ ಆಧಾರದ ಮೇಲೆ ಮಾಡತಕ್ಕದ್ದು.

(1) ಕಾರ್ಯದರ್ಶಿ ಹುದ್ದೆಯ ನೇಮಕಾತಿಯನ್ನು ವಿಶೇಷ ಮಂಡಳಿಯು ಆಯ್ಕೆಯಿಂದ ಮುಂಬಡ್ತಿ ಮೂಲಕ ಮಾಡತಕ್ಕದ್ದು. ವಿಶೇಷ ಮಂಡಳಿಯು, ಅಪರ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿ ವೃಂದಗಳಿಗೆ ಮುಂಬಡ್ತಿ ಮೂಲಕ ನೇಮಕಾತಿಗಳನ್ನು ಮಾಡಲು ಸಹ ಸಕ್ಷಮವಾಗಿರತಕ್ಕದ್ದು. ಕಾರ್ಯದರ್ಶಿ, ಅಪರ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿ ವೃಂದಗಳಿಗೆ ಮುಂಬಡ್ತಿ ನೀಡಲು ಅರ್ಹ ವ್ಯಕ್ತಿಗಳ ಹೆಸರುಗಳನ್ನು ಶಿಫಾರಸ್ಸು ಮಾಡಲು ಇಲಾಖಾ ಮುಂಬಡ್ತಿ ಸಮಿತಿ (ಡಿಪಿಸಿ) ಅನ್ನು ವಿಶೇಷ ಮಂಡಳಿಯು ರಚಿಸತಕ್ಕದ್ದು.

ಕಾರ್ಯದರ್ಶಿ, ಅಪರ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಯ ವೃಂದಗಳ ಆಯ್ಕೆ/ಮುಂಬಡ್ತಿಗೆ ಸಂಬಂಧಿಸಿದಂತೆ ಇಲಾಖಾ ಮುಂಬಡ್ತಿ ಸಮಿತಿಯು (ಡಿಪಿಸಿ) ಈ ಕೆಳಕಂಡವರುಗಳನ್ನು ಒಳಗೊಂಡಿರತಕ್ಕದ್ದು.

| ಕ್ರ.ಸಂ | ಅಧಿಕಾರಿಗಳು | |
|---|---|---|
| 1. | ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ | ಅಧ್ಯಕ್ಷರು |
| 2. | ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯನ್ನು ಹೊಂದಿರುವ ಅವರ ಪ್ರತಿನಿಧಿ | ಸದಸ್ಯರು |
| 3. | ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯನ್ನು ಹೊಂದಿರುವ ಅವರ ಪ್ರತಿನಿಧಿ | ಸದಸ್ಯರು |
| 4. | ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯನ್ನು ಹೊಂದಿರುವ ಅವರ ಪ್ರತಿನಿಧಿ | ಸದಸ್ಯರು |
| 5. | ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯನ್ನು ಹೊಂದಿರುವ ಅವರ ಪ್ರತಿನಿಧಿ | ಸದಸ್ಯರು |
| 6. | ಕರ್ನಾಟಕ ವಿಧಾನ ಪರಿಷತ್ತಿನ ಯಾವುದೇ ಗ್ರೂಪ್ 'ಎ' ಅಧಿಕಾರಿ | ಸದಸ್ಯ ಕಾರ್ಯದರ್ಶಿ |

(2) ಗ್ರೂಪ್-ಎ (ಕಾರ್ಯದರ್ಶಿ, ಅಪರ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಯವರುಗಳನ್ನು ಹೊರತುಪಡಿಸಿ) ಮತ್ತು ಗ್ರೂಪ್ 'ಬಿ' ಮತ್ತು 'ಸಿ' ಗೆ ಸೇರಿದ ಎಲ್ಲಾ ಇತರೆ ಹುದ್ದೆಗಳಿಗೆ ಮುಂಬಡ್ತಿಗಳನ್ನು ಜ್ಯೇಷ್ಠತೆ ಮತ್ತು ಅರ್ಹತೆಯ ಆಧಾರದ ಮೇಲೆ ಸಭಾಪತಿಗಳು ಮಾಡತಕ್ಕದ್ದು. ಮುಂಬಡ್ತಿಗಾಗಿ ಸೂಕ್ತ ವ್ಯಕ್ತಿಗಳ ಹೆಸರುಗಳನ್ನು ಶಿಫಾರಸ್ಸು ಮಾಡಲು ಇಲಾಖಾ ಮುಂಬಡ್ತಿ ಸಮಿತಿಯು (ಡಿಪಿಸಿ) ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು. ಯಾವುದೇ ವೃಂದಕ್ಕೆ ಮುಂಬಡ್ತಿಯನ್ನು ನೀಡುವ ಸಂದರ್ಭದಲ್ಲಿ, ಮುಂಬಡ್ತಿಗಾಗಿ ಯಾರೇ ವ್ಯಕ್ತಿಯ ಯುಕ್ತತೆಯ ಬಗ್ಗೆ ಸಭಾಪತಿಗಳ ನಿರ್ಧಾರವೇ ಅಂತಿಮವಾಗಿರತಕ್ಕದ್ದು.

| ಕ್ರ.ಸಂ | ಅಧಿಕಾರಿಗಳು | |
|---|---|---|
| 1. | ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು | ಅಧ್ಯಕ್ಷರು |
| 2. | ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಒಬ್ಬ ಅಧಿಕಾರಿ | ಸದಸ್ಯರು |
| 3. | ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಒಬ್ಬ ಅಧಿಕಾರಿ | ಸದಸ್ಯರು |
| 4. | ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ಸಮಾಜ ಕಲ್ಯಾಣ ಇಲಾಖೆಯ ಒಬ್ಬ ಅಧಿಕಾರಿ | ಸದಸ್ಯರು |
| 5. | ಉಪ ಕಾರ್ಯದರ್ಶಿ (ಆಡಳಿತ), ಕರ್ನಾಟಕ ವಿಧಾನ ಪರಿಷತ್ತು | ಸದಸ್ಯರು |
| 6. | ಅಧೀನ ಕಾರ್ಯದರ್ಶಿ (ಆಡಳಿತ), ಕರ್ನಾಟಕ ವಿಧಾನ ಪರಿಷತ್ತು | ಸದಸ್ಯ ಕಾರ್ಯದರ್ಶಿ |

11. **ಸಿಬ್ಬಂದಿ ಮಾದರಿ:-**
ಈ ಕೆಳಕಂಡ ಸಿಬ್ಬಂದಿ ವರ್ಗವನ್ನು ರಾಜ್ಯ ಸಿವಿಲ್ ಸೇವೆಯ ಯಾವುದೇ ವೃಂದಗಳನ್ನು ಹೊಂದಿರುವ ಯಾವುದೇ ತತ್ಸಮಾನ ದರ್ಜೆಯಿಂದ ಪ್ರತಿನಿಯೋಜನೆಯ ಮೂಲಕ ಭರ್ತಿ ಮಾಡಬಹುದು, ಎಂದರೆ:-

(i) **ಸಭಾಪತಿಗಳ ಆಪ್ತ ಸಿಬ್ಬಂದಿ ಶಾಖೆ:-**

| | | | |
|---|---|---|---|
| ಸಭಾಪತಿಗಳ ಕಾರ್ಯದರ್ಶಿ | : | 1 | ಕರ್ನಾಟಕ ವಿಧಾನ ಪರಿಷತ್ತಿನ ಉಪ ಕಾರ್ಯದರ್ಶಿಗಿಂತ ಕಡಿಮೆಯಿಲ್ಲದ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಗ್ರೂಪ್ 'ಎ' ಅಧಿಕಾರಿಗಳು |
| ಆಪ್ತ ಕಾರ್ಯದರ್ಶಿ | : | 1 | (ಗ್ರೂಪ್ – ಬಿ ಮತ್ತು ಅದಕ್ಕಿಂತ ಮೇಲಿನ ಶ್ರೇಣಿಯ ಅಧಿಕಾರಿ) |
| ಆಪ್ತ ಕಾರ್ಯದರ್ಶಿ | : | 1 | ಗ್ರೂಪ್ – ಬಿ ಮತ್ತು ಅದಕ್ಕಿಂತ ಮೇಲಿನ ಶ್ರೇಣಿಯ ಅಧಿಕಾರಿಗಳಿಂದ ಭರ್ತಿ ಮಾಡಬಹುದಾದ ವಿಶೇಷ ಕರ್ತವ್ಯಾಧಿಕಾರಿ |
| ಲಿಪಿಕ ಸಿಬ್ಬಂದಿ | : | 4 | (ಹಿರಿಯ ಸಹಾಯಕರು ಅಥವಾ ಸಹಾಯಕರು ಅಥವಾ ಶೀಘ್ರಲಿಪಿಗಾರ ಅಥವಾ ದತ್ತಾಂಶ ನಮೂದು ಸಹಾಯಕ ಅಥವಾ ಕಿರಿಯ ಸಹಾಯಕ ಅಥವಾ ಯಾರೇ ಇತರ ಗ್ರೂಪ್ 'ಸಿ' ನೌಕರರು) |
| ಕನ್ನಡ ಶೀಘ್ರಲಿಪಿಗಾರ | : | 1 | |
| ವಾಹನ ಚಾಲಕರು | : | 2 | |
| ಗ್ರೂಪ್ ಡಿ ನೌಕರರು | : | 4 | |
| ಅಡುಗೆಯವರು | : | 1 | |

ii) **ಸಂಸದೀಯ ಪದಾಧಿಕಾರಿಗಳ ಆಪ್ತ ಸಿಬ್ಬಂದಿ ಶಾಖೆ:-**

| | | | |
|---|---|---|---|
| ಆಪ್ತ ಕಾರ್ಯದರ್ಶಿ | : | 1 | (ಗ್ರೂಪ್ 'ಬಿ' ಮತ್ತು ಅದಕ್ಕಿಂತ ಮೇಲಿನ ಶ್ರೇಣಿಯ ಅಧಿಕಾರಿ) |
| ಲಿಪಿಕ ಸಿಬ್ಬಂದಿ | : | 4 | (ಹಿರಿಯ ಸಹಾಯಕರು ಅಥವಾ ಸಹಾಯಕರು ಅಥವಾ ಶೀಘ್ರಲಿಪಿಗಾರರು ಅಥವಾ ದತ್ತಾಂಶ ನಮೂದು ಸಹಾಯಕರು ಅಥವಾ ಕಿರಿಯ ಸಹಾಯಕರು ಅಥವಾ ಯಾರೇ ಇತರ ಗ್ರೂಪ್ 'ಸಿ' ನೌಕರರು) |
| ಕನ್ನಡ ಶೀಘ್ರಲಿಪಿಗಾರರು | : | 1 | |
| ಚಾಲಕರು | : | 2 | |
| ಗ್ರೂಪ್ 'ಡಿ' ಸಿಬ್ಬಂದಿಗಳು | : | 4 | |

(iii) ಈ ನಿಯಮಗಳಲ್ಲಿ ಏನೇ ಇದ್ದಾಗ್ಯೂ, ಸಭಾಪತಿಗಳು, ಲಿಖಿತದಲ್ಲಿ ದಾಖಲಿಸಬಹುದಾದ ಕಾರಣಗಳಿಗಾಗಿ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಹಾಗೆ ಮಾಡುವುದು ಅವಶ್ಯಕವೆಂದು ಪರಿಗಣಿಸಿದರೆ, ನಿವೃತ್ತ ಅಧಿಕಾರಿ/ಸರ್ಕಾರಿ/ಸಾರ್ವಜನಿಕ ಉದ್ಯಮಗಳಲ್ಲಿನ ನೌಕರ ಅಥವಾ ಯಾರೇ ಇತರೆ ವ್ಯಕ್ತಿಯು ಅಂತಹ ಹುದ್ದೆಗಳ ಕರ್ತವ್ಯಗಳನ್ನು ನಿರ್ವಹಿಸಲು ಸಮರ್ಥನೆಂದು ಅಭಿಪ್ರಾಯಪಟ್ಟರೆ, ಒಪ್ಪಂದದ ಮೂಲಕ ನಿರ್ಧರಿಸಬಹುದಾದಂಥ ಷರತ್ತು ಮತ್ತು ನಿಬಂಧನೆಗಳನುಸಾರ ಗುತ್ತಿಗೆ ಆಧಾರದ ಮೇಲೆ ಸಂಸದೀಯ ಪದಾಧಿಕಾರಿಗಳ ಆಪ್ತ ಶಾಖೆಯಲ್ಲಿ ಹಲವು ಪ್ರವರ್ಗದ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಬಹುದು.

(iv) ಮೇಲಿನ ಉಪ-ನಿಯಮ (i) (ii) (iii) ಮತ್ತು (iv) ರ ಅಡಿಯಲ್ಲಿನ ಯಾರೇ ವ್ಯಕ್ತಿಯ ನೇಮಕಾತಿಯ ಒಟ್ಟು ಅವಧಿಯು ಸಂಸದೀಯ ಪದಾಧಿಕಾರಿಗಳ ಪದಾವಧಿಯೊಂದಿಗೆ ಮುಕ್ತಾಯಗೊಳ್ಳತಕ್ಕದ್ದು.

**12. ಶಿಸ್ತುಕ್ರಮ ವ್ಯವಹರಣೆಗಳಿಗೆ (disciplinary proceedings) ಸಂಬಂಧಿಸಿದ ಉಪಬಂಧಗಳು:-**

ಶಿಸ್ತುಕ್ರಮ ವಿಷಯಗಳಿಗೆ ಸಂಬಂಧಿಸಿದಂತೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ಸಿವಿಲ್ ಸೇವೆಗಳು, (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಉಪಬಂಧಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಸಿಬ್ಬಂದಿಗೆ ಅನ್ವಯಿಸತಕ್ಕದ್ದು. ನೇಮಕಾತಿ ಪ್ರಾಧಿಕಾರಗಳು ಮತ್ತು ವಿಧಿಸಬಹುದಾದ ದಂಡಗಳು ಹಾಗೂ ಅಪೀಲು ಪ್ರಾಧಿಕಾರಗಳು ಅನುಸೂಚಿ(iii)ರಲ್ಲಿ ನಿರ್ದಿಷ್ಟಪಡಿಸಲಾದಂತೆ ಇರತಕ್ಕದ್ದು.

ಪರಂತು, ಸಭಾಪತಿಗಳು, ವಿಶೇಷ ಅಧಿಸೂಚನೆಯ ಮೂಲಕ ಕೆಲವು ಶಿಸ್ತಿನ ಅಧಿಕಾರಗಳನ್ನು ಕಾರ್ಯದರ್ಶಿ ಅಥವಾ ಅವರು ಸೂಕ್ತವೆಂದು ಭಾವಿಸಬಹುದಾದಂಥ ಕರ್ನಾಟಕ ವಿಧಾನ ಪರಿಷತ್ತಿನ ಯಾರೇ ಇತರೆ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

**13. ಈ ನಿಯಮಗಳಲ್ಲಿ ಉಪಬಂಧಿಸದಿರುವ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳ ಅನ್ವಯ:-**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ರಚಿಸಲಾದ ನಿಯಮಗಳು ಮತ್ತು ಸದರಿ ಅಧಿನಿಯಮದ 3ನೇ ಪ್ರಕರಣದ (3) ನೇ ಉಪ-ಪ್ರಕರಣದ ಅಡಿಯಲ್ಲಿ ರಚಿಸಲಾದ ಭಾವಿತ ನಿಯಮಗಳ ಅನ್ವಯ:-

ಎ. ಕರ್ನಾಟಕ ಸರ್ಕಾರಿ ನೌಕರರ (ಜ್ಯೇಷ್ಠತೆ) ನಿಯಮಗಳು, 1957;
ಬಿ. ಕರ್ನಾಟಕ ರಾಜ್ಯ ಸಿವಿಲ್ ಸೇವಾ (ನಡತೆ) ನಿಯಮಗಳು, 2021;
ಸಿ. ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳು, 1958;
ಡಿ. ಕರ್ನಾಟಕ ಆರ್ಥಿಕ ಸಂಹಿತೆ, 1958;
ಇ. ಸಾದಿಲ್ವಾರು ವೆಚ್ಚದ ಕೈಪಿಡಿ, 1958;
ಎಫ್. ಕರ್ನಾಟಕ ಸರ್ಕಾರಿ ನೌಕರರ (ವೈದ್ಯೋಪಚಾರ) ನಿಯಮಗಳು, 1963;
ಜಿ. ಕರ್ನಾಟಕ ಸಿವಿಲ್ ಸೇವೆಗಳ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2021;
ಹೆಚ್. ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು, 1977;
ಐ. ಕರ್ನಾಟಕ ಸಿವಿಲ್ ಸೇವೆಗಳ (ಪರಿವೀಕ್ಷಣಾ) ನಿಯಮಗಳು, 1977;
ಜೆ. ಕರ್ನಾಟಕ ಸಿವಿಲ್ ಸೇವೆಗಳ (ಕಾರ್ಯಕ್ಷಮತೆ ವರದಿ) ನಿಯಮಗಳು, 1994;
ಕೆ. ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ) ನಿಯಮಗಳು, 1958;
ಎಲ್. ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆ ನಿಯಮಗಳು, 1981;
ಎಂ. ಕರ್ನಾಟಕ ಸಾಮಾನ್ಯ ಭವಿಷ್ಯನಿಧಿ ನಿಯಮಗಳು, 1957;
ಎನ್. ಕರ್ನಾಟಕ ಇಲಾಖಾ ವಿಚಾರಣೆಗಳ (ಸಾಕ್ಷಿಗಳ ಹಾಜರಾತಿ ಮತ್ತು ದಾಖಲೆಗಳ ಹಾಜರುಪಡಿಸುವಿಕೆಯ ಜಾರಿ ನಿಯಮಗಳು) 1961;
ಒ. ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಹಾಗೂ ಅಪೀಲು) ನಿಯಮಗಳು, 1957;
ಪಿ. ಕರ್ನಾಟಕ ಸಿವಿಲ್ ಸೇವೆಗಳ (ಅಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978 ಮತ್ತು
ಕ್ಯೂ. ಕರ್ನಾಟಕ ಸಿವಿಲ್ ಸೇವೆಗಳ (ಬೆರಳಚ್ಚುಗಾರರು ಮತ್ತು ಕಿರಿಯ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು) (ವೃಂದ ಬದಲಾವಣೆ) ನಿಯಮಗಳು, 1964;
ಆರ್. ಕರ್ನಾಟಕ ಸಿವಿಲ್ ಸೇವೆಗಳ (ಸೇವೆ ಮತ್ತು ಕನ್ನಡ ಭಾಷೆಯ ಪರೀಕ್ಷೆ) ನಿಯಮಗಳು, 1974;
ಎಸ್. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ ಅಡಿಯಲ್ಲಿ ಸರ್ಕಾರದಿಂದ ರಚಿಸಲಾದ ಯಾವುದೇ ಇತರೆ ನಿಯಮಗಳು ಮತ್ತು ಸದರಿ ಅಧಿನಿಯಮದ ಪ್ರಕರಣ 3 ರ ಉಪ-ಪ್ರಕರಣ (3)ರ ಅಡಿಯಲ್ಲಿ ರಚಿಸಲಾದ ಬಾಧಿತ ನಿಯಮಗಳು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿಗಳಿಗೆ ಮತ್ತು ಈ ನಿಯಮಗಳ ಅಡಿಯಲ್ಲಿ ನೇಮಕಗೊಂಡ ಸಿಬ್ಬಂದಿಗಳಿಗೆ ಅನ್ವಯವಾಗತಕ್ಕದ್ದು.

ಪರಂತು, ಸಭಾಪತಿಗಳು, (ಎ) ಇಂದ (ಎಸ್)ವರೆಗಿನ ಖಂಡಗಳಲ್ಲಿ ಉಲ್ಲೇಖಿಸಲಾದ ನಿಯಮಗಳ ಉಪಬಂಧಗಳ ಅಡಿಯಲ್ಲಿ ರಾಜ್ಯ ಸರ್ಕಾರದ ಅಧಿಕಾರಗಳನ್ನು ಚಲಾಯಿಸಬಹುದು.

ಮತ್ತು ಪರಂತು, ಮೇಲೆ ಉಲ್ಲೇಖಿಸಲಾದ ನಿಯಮಗಳ ಯಾವುದೇ ಸಡಿಲಿಕೆಯನ್ನು ಸಮುಚಿತವಾದ ಪ್ರಕರಣಗಳಲ್ಲಿ ಸಮರ್ಥಿಸಿದ್ದಲ್ಲಿ, ಸಡಿಲಿಕೆಗಾಗಿ ಅಂಥ ಉಪಬಂಧವನ್ನು ಈ ನಿಯಮಗಳಲ್ಲಿಯೇ ಒದಗಿಸಿರುವೆಡೆಯಲ್ಲೆಲ್ಲಾ ಸಂದರ್ಭಾನುಸಾರ ಆರ್ಥಿಕ ಇಲಾಖೆ ಅಥವಾ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯೊಂದಿಗೆ ಸಮಾಲೋಚಿಸಿದ ತರುವಾಯ ಸಭಾಪತಿಗಳ ಅನುಮೋದನೆಯೊಂದಿಗೆ ಅಂಥ ಸಡಿಲಿಕೆಯನ್ನು ಮಾಡತಕ್ಕದ್ದು.

ಅಲ್ಲದೆ ಪರಂತು, ಸಭಾಪತಿಯವರು ಮೇಲಿನ ಸದರಿ ನಿಯಮಗಳ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರಿಗೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಕಳುಹಿಸಿಕೊಡತಕ್ಕದ್ದು.

**14. ಇತರೆ ಸೇವಾ ಷರತ್ತುಗಳು:-**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಸದಸ್ಯರುಗಳ ಮತ್ತು ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಇತರೆ ಸೇವಾ ಷರತ್ತುಗಳು ಈ ನಿಯಮಗಳಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು, ಕರ್ನಾಟಕ ಸಿವಿಲ್ ಸೇವೆಗಳಲ್ಲಿ ತತ್ಸಮಾನ ಹುದ್ದೆಗಳನ್ನು ಹೊಂದಿರುವ ಸರ್ಕಾರಿ ನೌಕರರ ಸಂಬಂಧದಲ್ಲಿ ನಿರ್ದಿಷ್ಟಪಡಿಸಲಾದಂತಹ ರೀತಿಯಲ್ಲೇ ಇರತಕ್ಕದ್ದು.

**15. ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನ:-**

i) ಈ ನಿಯಮಗಳಿಗೊಳಪಟ್ಟು, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯಕ್ಕೆ ಸಂಬಂಧಿಸಿದ ಹಣಕಾಸಿನ ಪರಿಣಾಮಗಳನ್ನು ಹೊಂದಿರುವ ಎಲ್ಲಾ ವಿಷಯಗಳನ್ನು ಕುರಿತು ಸಭಾಪತಿಗಳ ಅನುಮೋದನೆಯೊಂದಿಗೆ ಕಾರ್ಯದರ್ಶಿಯವರು, ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರೊಂದಿಗೆ ನೇರವಾಗಿ ವ್ಯವಹರಿಸತಕ್ಕದ್ದು.

ii) ಸಭಾಪತಿಗಳು, ಕಾಲಕಾಕಾಲಕ್ಕೆ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಈ ನಿಯಮಗಳ ನಿರ್ವಹಣೆಯಿಂದ ಉದ್ಭವಿಸುವ ವ್ಯವಹರಣೆಗಳನ್ನು ಅನುಕೂಲಕರವಾಗಿ ಹಾಗೂ ಪರಿಣಾಮಕಾರಿಯಾಗಿ ನಡೆಸಲು ಮತ್ತು ಆ ಉದ್ದೇಶಕ್ಕಾಗಿ ಅನುಸರಿಸಬೇಕಾದ ಕಾರ್ಯವಿಧಾನಕ್ಕೆ ಉಪಬಂಧವನ್ನು ಕಲ್ಪಿಸಬಹುದು.

iii) ಸಭಾಪತಿಯವರ ಅಥವಾ ಸಂದರ್ಭಾನುಸಾರವಾಗಿ ವಿಶೇಷ ಮಂಡಳಿಯ ಅನುಮೋದನೆಯಿಲ್ಲದೆ ಆರ್ಥಿಕ ಪರಿಣಾಮಗಳನ್ನು ಹೊಂದಿರುವ ಯಾವುದೇ ಆದೇಶವನ್ನು ಹೊರಡಿಸತಕ್ಕದಲ್ಲ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಪ್ರಸ್ತಾವನೆಗಳನ್ನು ಸಭಾಪತಿಯವರು ಮತ್ತು ವಿಶೇಷ ಮಂಡಳಿಯ ಮುಂದೆ ಕಾರ್ಯದರ್ಶಿಯವರು ಆರ್ಥಿಕ ಇಲಾಖೆಯ ಷರಾಗಳೊಂದಿಗೆ ಮಂಡಿಸತಕ್ಕದ್ದು.

**16. ಸಭಾಪತಿ ಮತ್ತು ಉಪ-ಸಭಾಪತಿಯವರ ಹುದ್ದೆಗಳು ಖಾಲಿಯಿರುವ ಸಂದರ್ಭದಲ್ಲಿ:-**

i) ಸಭಾಪತಿಯವರ ಹುದ್ದೆ ಖಾಲಿಯಿರುವ ಸಂದರ್ಭದಲ್ಲಿ ಅಥವಾ ಸಭಾಪತಿಯವರಿಗೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ನಿರ್ಬಂಧವಿರುವ ಸಂದರ್ಭದಲ್ಲಿ, ಉಪ ಸಭಾಪತಿಯವರು ಭಾರತ ಸಂವಿಧಾನದ ಅನುಚ್ಛೇದ 184 (1)ರ ಅಡಿಯಲ್ಲಿ ಸಭಾಪತಿಯಾಗಿ ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಆಡಳಿತ ನಿರ್ವಹಣೆಯನ್ನು ಮಾಡತಕ್ಕದ್ದು ಮತ್ತು ಸಭಾಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಇವರು ಚಲಾಯಿಸತಕ್ಕದ್ದು;

ii) ಸಭಾಪತಿಯವರು ಮತ್ತು ಉಪ ಸಭಾಪತಿಯವರ ಹುದ್ದೆಗಳೆರಡೂ ಖಾಲಿಯಿರುವ ಸಂದರ್ಭದಲ್ಲಿ ಅನುಚ್ಛೇಧ 184 (1)ರ ಅಡಿಯಲ್ಲಿ ರಾಜ್ಯಪಾಲರಿಂದ ನೇಮಕಗೊಂಡ ವ್ಯಕ್ತಿಯು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಆಡಳಿತ ನಿರ್ವಹಣೆಯನ್ನು ಮಾಡತಕ್ಕದ್ದು ಮತ್ತು ಆತನು ಸಭಾಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು;

iii) ಸಭಾಪತಿಯವರು ಮತ್ತು ಉಪ ಸಭಾಪತಿಗಳ ಹುದ್ದೆಗಳೆರಡೂ ಖಾಲಿಯಿರುವ ಸಂದರ್ಭದಲ್ಲಿ, ಅಥವಾ ತಮ್ಮ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ನಿರ್ಬಂಧವಿರುವ ಸಂದರ್ಭದಲ್ಲಿ, ಕಾರ್ಯದರ್ಶಿಗಳು, ರಾಜ್ಯಪಾಲರ ಯಾವುದೇ ನಿರ್ದೇಶನಗಳಿಗೊಳಪಟ್ಟು, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದ ಆಡಳಿತವನ್ನು ನಿರ್ವಹಿಸತಕ್ಕದ್ದು;

ಪರಂತು, ಸಭಾಪತಿಯವರ ಅನುಮೋದನೆ ಅಗತ್ಯವಿರುವಂಥ ಯಾವುದೇ ವಿಷಯವನ್ನು ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸತಕ್ಕದ್ದು;

ಮತ್ತೂ ಪರಂತು, ಸಭಾಪತಿಯವರ ಸಮಾಲೋಚನೆ, ಅನುಮೋದನೆ ಅಥವಾ ಮಂಜೂರಾತಿಯ ಅವಶ್ಯಕತೆವಿರುವ ಯಾವುದೇ ವಿಷಯವನ್ನು ಕಾರ್ಯದರ್ಶಿಗಳು ಆ ವಿಷಯವನ್ನು ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗದಂತೆ ಅದನ್ನು ನೂತನ ಸಭಾಪತಿಯವರು ಅಥವಾ ಉಪಸಭಾಪತಿಯವರು ಆಯ್ಕೆಯಾಗುವವರೆಗೆ ಅಥವಾ ಅವರಲ್ಲಿ ಯಾರೇ ಒಬ್ಬರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು **ಕಾರ್ಯಸಾಧ್ಯವಾಗುವವರೆಗೆ** ಮುಂದಕ್ಕೆ ಹಾಕತಕ್ಕದ್ದು.

**17. ನಿರಸನ ಮತ್ತು ಉಳಿಸುವಿಕೆಗಳು:-**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 1998 ಅನ್ನು ಈ ಮೂಲಕ ನಿರಸನಗೊಳಿಲಾಗಿದೆ:-

ಪರಂತು, ಅಂಥ ನಿರಸನವು

ಎ) ಸದರಿ ನಿಯಮಗಳ ಈ ಹಿಂದಿನ ಆಡಳಿತ ನಿರ್ವಹಣೆ ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಅದನ್ನು ಮಾಡಲು ಅವಕಾಶ ಮಾಡಿಕೊಟ್ಟ ಯಾವುದೇ ಕಾರ್ಯಕ್ಕೆ; ಅಥವಾ

ಬಿ) ಸದರಿ ನಿಯಮಗಳ ಮೇರೆಗೆ ಈಗಾಗಲೇ ಅರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

**ಸಭಾಪತಿಯವರ ಆದೇಶಾನುಸಾರ**

**ಕಾರ್ಯದರ್ಶಿ**

**ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ**

## ಅನುಸೂಚಿ – I

| ಕ್ರ.ಸಂ | ಹುದ್ದೆಗಳ ವರ್ಗ | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| | **ಗ್ರೂಪ್ – ಎ** | | |
| 1. | ಕಾರ್ಯದರ್ಶಿ | ರೂ.104600-150600 | 01 |
| 2. | ಅಪರ ಕಾರ್ಯದರ್ಶಿ | ರೂ.97100-141300 | 01 |
| 3. | ಜಂಟಿ ಕಾರ್ಯದರ್ಶಿ | ರೂ.90500-123300 | 01 |
| 4. | ಸಿಸ್ಟಂ ಮ್ಯಾನೇಜರ್ | ರೂ.82000-117700 | 01 |
| 5. | ಉಪ ಕಾರ್ಯದರ್ಶಿ | ರೂ.74400-109600 | 05 |
| 6. | ಮುಖ್ಯ ಚರ್ಚಾ ಸಂಪಾದಕರು | ರೂ.74400-109600 | 01 |
| 7. | ಸಿಸ್ಟಂ ಅನಾಲಿಸ್ಟ್ | ರೂ.67550-104600 | 01 |
| 8. | ಅಧೀನ ಕಾರ್ಯದರ್ಶಿ | ರೂ.52650-97100 | 07 |
| 9. | ಅಧೀನ ಕಾರ್ಯದರ್ಶಿ (ಭಾಷಾಂತರ) | ರೂ.52650-97100 | 01 |
| 10. | ಚರ್ಚಾ ಸಂಪಾದಕರು | ರೂ.52650-97100 | 03 |
| 11. | ಮಾರ್ಷಲ್ (ಪ್ರತಿನಿಯೋಜನೆ ಹುದ್ದೆ) | | 01 |
| 12. | ಸೀನಿಯರ್ ಪ್ರೋಗ್ರಾಮರ್ | ರೂ.52650-97100 | 02 |
| | | ಒಟ್ಟು | 25 |
| | **ಗ್ರೂಪ್ – ಬಿ** | | |
| 13. | ಶಾಖಾಧಿಕಾರಿ | ರೂ.43100-83900 | 11 |
| 14. | ಶಾಖಾಧಿಕಾರಿ (ಭಾಷಾಂತರ) (ಪ್ರತಿನಿಯೋಜನೆ ಹುದ್ದೆ) | | 01 |
| 15. | ಹಣಕಾಸು ಅಧಿಕಾರಿ (ಪ್ರತಿನಿಯೋಜನೆ ಹುದ್ದೆ) | | 01 |
| 16. | ಅಭಿಲೇಖನಾಧಿಕಾರಿ/ಸಹಾಯಕ ಚರ್ಚಾ ಸಂಪಾದಕರು | ರೂ.43100-83900 | 14 |
| 17. | ಜ್ಯೂನಿಯರ್ ಪ್ರೋಗ್ರಾಮರ್ | ರೂ.43100-83900 | 02 |
| | | ಒಟ್ಟು | 29 |
| | **ಗ್ರೂಪ್ – ಸಿ** | | |
| 18. | ಹಿರಿಯ ಸಹಾಯಕ | ರೂ.37900-70850 | 10 |
| 19. | ವರದಿಗಾರರು | ರೂ.37900-70850 | 23 |
| 20. | ಭಾಷಾಂತರಕಾರರು (ಪ್ರತಿನಿಯೋಜನೆ ಹುದ್ದೆ) | | 03 |
| 21. | ಕಿರಿಯ ಕನ್ಸೋಲ್ ಆಪರೇಟರ್ | ರೂ.37900-70850 | 04 |
| 22. | ಸಹಾಯಕರು | ರೂ.30350-58250 | 17 |
| 23. | ಶೀಘ್ರಲಿಪಿಗಾರರು | ರೂ.30350-58250 | 13 |
| 24. | ಕಂಪ್ಯೂಟರ್ ಆಪರೇಟರ್ | ರೂ.30350-58250 | 04 |
| 25. | ಕಿರಿಯ ಸಹಾಯಕರು | ರೂ.21400-42000 | 23 |
| 26. | ಡೆಟಾ ಎಂಟ್ರಿ ಅಸಿಸ್ಟೆಂಟ್ | ರೂ.21400-42000 | 12 |
| 27. | ಹಿರಿಯ ವಾಹನ ಚಾಲಕರು | ರೂ.27650-52650 | 07 |
| 28. | ವಾಹನ ಚಾಲಕರು | ರೂ.21400-42000 | 27 |
| | | ಒಟ್ಟು | 143 |

## ಗ್ರೂಪ್ – ಡಿ ಮತ್ತು ಇತರರು

| | | | |
|---|---|---|---|
| 29 | ಜಮೇದಾರ್ | ರೂ.19950-37900 | 22 |
| 30 | ಹಿರಿಯ ಬಡಗಿ | ರೂ.21400-42000 | 01 |
| 31 | ಬಡಗಿ | ರೂ.18600-32600 | 02 |
| 32 | ಕಚೇರಿ ಸಹಾಯಕ/ಕಾವಲುಗಾರ/ವಾಹನ ಪರಿಚಾರಕ/ಕ್ಲೀನರ್ ಸ್ವೀಪರ್ ಕಂ-ಸ್ಕ್ಯಾವೆಂಜರ್ | ರೂ.17000-28950 | 62 |
| | | ಒಟ್ಟು | 87 |

| | |
|---|---|
| ಗ್ರೂಪ್– ಎ | 25 |
| ಗ್ರೂಪ್– ಬಿ | 29 |
| ಗ್ರೂಪ್– ಸಿ | 143 |
| ಗ್ರೂಪ್– ಡಿ | 87 |
| ಒಟ್ಟು | 284 |

**ಅನುಸೂಚಿ – II**

**ಭಾಗ – I ಆಡಳಿತಾತ್ಮಕ ವಿಭಾಗ**

| ಕ್ರಮ ಸಂಖ್ಯೆ | ಪ್ರವರ್ಗ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಅವಶ್ಯಕ ವಿದ್ಯಾರ್ಹತೆ |
|---|---|---|---|---|
| 1. | **ಕಾರ್ಯದರ್ಶಿ** (ರೂ.104600-150600) | 01 | ಅಪರ ಕಾರ್ಯದರ್ಶಿ ವೃಂದದಿಂದ ಆಯ್ಕೆ ಮೂಲಕ ಮುಂಬಡ್ತಿಯ ಮೂಲಕ<br>**ಅಥವಾ**<br>ವಿಶೇಷ ಮಂಡಳಿಯು ಕೋರಿದ ಆ ವೃಂದದಲ್ಲಿರುವ ಮೂವರು ಅಧಿಕಾರಿಗಳ ಪಟ್ಟಿಯಿಂದ ವಿಶೇಷ ಮಂಡಳಿಯು ಆಯ್ಕೆ ಮಾಡಿದ ಹಿರಿಯ ಕಾಲಿಕ ವೇತನ ಶ್ರೇಣಿಯಲ್ಲಿನ ಜಿಲ್ಲಾ ನ್ಯಾಯಾಧೀಶರ ವೃಂದದಲ್ಲಿನ ನ್ಯಾಯಾಂಗ ಸೇವೆಯ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ<br>**ಅಥವಾ**<br>ಕೆಎಎಸ್ ದರ್ಜೆಯಲ್ಲಿನ (ಹಿರಿಯ ಕಾಲಿಕ ವೇತನಶ್ರೇಣಿ) ಅಧಿಕಾರಿಗಳನ್ನು ಪ್ರತಿನಿಯೋಜಿಸುವ ಮೂಲಕ | **ಆಯ್ಕೆ ಮೂಲಕ ಮುಂಬಡ್ತಿಗಾಗಿ:-**<br>ಎ) ಕಾನೂನು ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಹೊಂದಿರಬೇಕು;<br>ಬಿ) ವಿಧಾನ ಮಂಡಲದ ಕಾರ್ಯಕಲಾಪಗಳಲ್ಲಿ ನುರಿತವರಾಗಿರಬೇಕು. ಮತ್ತು ಸಾಂವಿಧಾನಿಕ ಕಾನೂನಿನ ಉತ್ತಮ ಜ್ಞಾನವನ್ನು ಹೊಂದಿರಬೇಕು;<br>ಸಿ) ಅಪರ ಕಾರ್ಯದರ್ಶಿ ವೃಂದದಲ್ಲಿ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು.<br>**ಪ್ರತಿನಿಯೋಜನೆಗಾಗಿ:-**<br>ಜಿಲ್ಲಾ ನ್ಯಾಯಾಧೀಶರಾಗಿ ಅಥವಾ ಕೆ.ಎ.ಎಸ್. ವೃಂದದಲ್ಲಿ (ಹಿರಿಯ ಕಾಲಿಕ ವೇತನಶ್ರೇಣಿ) 5 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರಬೇಕು. ಮತ್ತು ಕಾನೂನು ಪದವಿಯನ್ನು ಹೊಂದಿರಬೇಕು. |
| 2. | **ಅಪರ ಕಾರ್ಯದರ್ಶಿ** (ರೂ.97100-1,41,300) | 01 | ಜಂಟಿ ಕಾರ್ಯದರ್ಶಿಗಳ ವೃಂದದಿಂದ ಮುಂಬಡ್ತಿಯ ಮೂಲಕ;<br>**ಅಥವಾ**<br>ನ್ಯಾಯಿಕ ಸೇವೆಯಿಂದ ಜಿಲ್ಲಾ ನ್ಯಾಯಾಧೀಶರ ದರ್ಜೆಯ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ | **ಮುಂಬಡ್ತಿಗಾಗಿ:-**<br>ಎ). ಕಾನೂನು ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಹೊಂದಿರಬೇಕು;<br>ಬಿ).ವಿಧಾನ ಮಂಡಲದ ಕಾರ್ಯಕಲಾಪಗಳಲ್ಲಿ ನುರಿತವರಾಗಿರಬೇಕು ಮತ್ತು ಸಾಂವಿಧಾನಿಕ ಕಾನೂನಿನಲ್ಲಿ ಉತ್ತಮ ಜ್ಞಾನವನ್ನು ಹೊಂದಿರಬೇಕು.<br>ಸಿ).ಜಂಟಿ ಕಾರ್ಯದರ್ಶಿ ವೃಂದದಲ್ಲಿ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |

| | | | | |
|---|---|---|---|---|
| | | | | **ಪ್ರತಿನಿಯೋಜನೆಗಾಗಿ:-**<br>ಜಿಲ್ಲಾ ನ್ಯಾಯಾಧೀಶರಾಗಿ 4 ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 3. | **ಜಂಟಿ ಕಾರ್ಯದರ್ಶಿ**<br>(ರೂ.90500-123000) | 01 | ಉಪ ಕಾರ್ಯದರ್ಶಿ ವೃಂದದಿಂದ ಮುಂಬಡ್ತಿ ಮೂಲಕ<br>**ಅಥವಾ**<br>ನ್ಯಾಯಾಂಗ ಸೇವೆಯಿಂದ ಜಿಲ್ಲಾ ನ್ಯಾಯಾಧೀಶರ ದರ್ಜೆಯ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ | **ಮುಂಬಡ್ತಿಗಾಗಿ:-**<br>ಎ)ಕಾನೂನಿನ ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಹೊಂದಿರಬೇಕು<br>ಬಿ)ಉಪ-ಕಾರ್ಯದರ್ಶಿ ವೃಂದದಲ್ಲಿ ಮೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು.<br>**ಪ್ರತಿನಿಯೋಜನೆಗಾಗಿ:**<br>ಜಿಲ್ಲಾ ನ್ಯಾಯಾಧೀಶರಾಗಿ ನಾಲ್ಕು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 4 | **ಉಪ ಕಾರ್ಯದರ್ಶಿ-**<br>ಎ) ಆಡಳಿತ<br>ಬಿ)ಲೆಕ್ಕಪತ್ರಗಳು<br>ಸಿ)ಶಾಸಕರ ಭವನ<br>ಡಿ)ಶಿಷ್ಟಾಚಾರ<br>(ರೂ.74400-109600) | 04 | ಅಧೀನ ಕಾರ್ಯದರ್ಶಿ ವೃಂದದಿಂದ ಮುಂಬಡ್ತಿ ಮೂಲಕ | **ಮುಂಬಡ್ತಿಗಾಗಿ:-**<br>ಎ)ಕಾನೂನಿನ ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಹೊಂದಿರಬೇಕು<br>ಬಿ)ಅಧೀನ ಕಾರ್ಯದರ್ಶಿ ವೃಂದದಲ್ಲಿ 3 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 5 | **ಉಪ ಕಾರ್ಯದರ್ಶಿ**<br>**ಎ) ಶಾಸನ ರಚನೆ**<br>**ಬಿ)ಪ್ರಶ್ನೆಗಳು**<br>(ರೂ.74400-109600 ) | 01 | ಅಧೀನ ಕಾರ್ಯದರ್ಶಿ ವೃಂದದಿಂದ ಮುಂಬಡ್ತಿ ಮೂಲಕ | **ಮುಂಬಡ್ತಿಗಾಗಿ:-**<br>ಎ)ಕಾನೂನಿನ ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಹೊಂದಿರಬೇಕು<br>ಬಿ)ಅಧೀನ ಕಾರ್ಯದರ್ಶಿ ವೃಂದದಲ್ಲಿ 3 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |

| | | | | |
|---|---|---|---|---|
| 6. | **ಅಧೀನ ಕಾರ್ಯದರ್ಶಿ** (ರೂ.52650-97100) | 07 | ಶಾಖಾಧಿಕಾರಿ ವೃಂದದಿಂದ ಮುಂಬಡ್ತಿ ಮೂಲಕ | **ಮುಂಬಡ್ತಿಗಾಗಿ:-**<br>ಎ)ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು<br><br>ಬಿ)ಶಾಖಾಧಿಕಾರಿ ವೃಂದದಲ್ಲಿ 3 ವರ್ಷಗಳಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು |
| 7. | **ಶಾಖಾಧಿಕಾರಿ** (ರೂ.43100-83900) | 11 | ಹಿರಿಯ ಸಹಾಯಕ ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ 75% ರಷ್ಟು<br>**ಮತ್ತು**<br>ನೇರ ನೇಮಕಾತಿ ಮೂಲಕ ಶೇಕಡಾ 25% ರಷ್ಟು | **ಮುಂಬಡ್ತಿಗಾಗಿ:-**<br>ಎ)ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು.<br>ಬಿ)ಹಿರಿಯ ಸಹಾಯಕರ ವೃಂದದಲ್ಲಿ 3 ವರ್ಷಗಳಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು.<br>**ನೇರ ನೇಮಕಾತಿಗಾಗಿ:**<br>ಕಾನೂನು ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಪಡೆದಿರಬೇಕು. |
| 8. | **ಹಿರಿಯ ಸಹಾಯಕ** (ರೂ.37900-70850) | 10 | 5:2 ರ ಅನುಪಾತದಲ್ಲಿ ಸಹಾಯಕ ಮತ್ತು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿ ಮೂಲಕ, ಅಂದರೆ ಪ್ರತಿ 4ನೇ ಮತ್ತು 7ನೇ ಖಾಲಿ ಹುದ್ದೆಯನ್ನು ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು. | ಸಹಾಯಕ/ಶೀಘ್ರಲಿಪಿಗಾರರ ವೃಂದದಲ್ಲಿ 3 ವರ್ಷಗಳಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 9. | **ಸಹಾಯಕ** (ರೂ.30350-58250) | 17 | ಕಿರಿಯ ಸಹಾಯಕ ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ ಎಪ್ಪತ್ತರಷ್ಟು<br>**ಮತ್ತು**<br>ನೇರ ನೇಮಕಾತಿ ಮೂಲಕ ಮೂವತ್ತರಷ್ಟು. | **ಮುಂಬಡ್ತಿಗಾಗಿ:-**<br>ಎ) ಕಿರಿಯ ಸಹಾಯಕರ ವೃಂದದಲ್ಲಿ 3 ವರ್ಷಗಳಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು.<br>**ನೇರ ನೇಮಕಾತಿಗಾಗಿ:**<br>ಕಾನೂನು ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಪಡೆದಿರಬೇಕು |

| | | | | |
|---|---|---|---|---|
| 10. | **ಶೀಘ್ರಲಿಪಿಗಾರರು** (ರೂ.30350-58250) | 13 | ದತ್ತಾಂಶ ನಮೂದು ಸಹಾಯಕ (ಡಾಟಾ ಎಂಟ್ರಿ ಅಸಿಸ್ಟೆಂಟ್) ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ 50 ರಷ್ಟು.<br>**ಮತ್ತು**<br>ನೇರ ನೇಮಕಾತಿ ಮೂಲಕ ಶೇಕಡಾ 50 ರಷ್ಟು | **ನೇರ ನೇಮಕಾತಿಗಾಗಿ:-**<br>ಎ)ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು.<br>ಬಿ)ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು (ಕೆಎಸ್‌ಇಇಬಿ) ನಡೆಸುವ ಹಿರಿಯ ದರ್ಜೆಯ ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಗಳ ಬೆರಳಚ್ಚು ಮತ್ತು ಹಿರಿಯ ದರ್ಜೆಯ ಶೀಘ್ರಲಿಪಿಯ ಪರೀಕ್ಷೆಗಳಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು.<br>**ಮುಂಬಡ್ತಿಗಾಗಿ:-**<br>ಎ)ಪದವಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.<br>ಬಿ)ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು (ಕೆಎಸ್‌ಇಇಬಿ) ನಡೆಸುವ ಕನ್ನಡ ಅಥವಾ ಇಂಗ್ಲೀಷ್ ಭಾಷೆಯ ಹಿರಿಯ ದರ್ಜೆ ಶೀಘ್ರಲಿಪಿಯ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು.<br>ಸಿ)ದತ್ತಾಂಶ ನಮೂದು ಸಹಾಯಕ (ಡಾಟಾ ಎಂಟ್ರಿ ಅಸಿಸ್ಟೆಂಟ್) ವೃಂದದಲ್ಲಿ ಮೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಬೇಕು. |
| 11. | **ಕಿರಿಯ ಸಹಾಯಕ** (ರೂ.21400-42000) | 23 | ಸಂಯೋಜಿತ ಜ್ಯೇಷ್ಠತೆ ಆಧಾರದ ಮೇಲೆ ಗ್ರೂಪ್-ಡಿ ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ 50ರಷ್ಟು<br>ಮುಂಬಡ್ತಿಗಾಗಿ ಕಾಯ್ದಿರಿಸಿದ ಶೇಕಡಾ 50 ಹುದ್ದೆಗಳಲ್ಲಿ ಶೇಕಡಾ 10 ಹುದ್ದೆಗಳನ್ನು ವಾಹನ ಚಾಲಕ ವೃಂದದಿಂದ ವರ್ಗಾವಣೆ ಮೂಡುವ ಮೂಲಕ ಭರ್ತಿ ಮಾಡತಕ್ಕದ್ದು. ಮುಂಬಡ್ತಿಗಾಗಿ ಅರ್ಹ ಅಭ್ಯರ್ಥಿಗಳು | **ಮುಂಬಡ್ತಿ ಮತ್ತು ವರ್ಗಾವಣೆಗಾಗಿ:-**<br>ಎ) ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು<br>ಬಿ) ಗ್ರೂಪ್ 'ಡಿ' ವೃಂದದಲ್ಲಿ 5 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. (ಜಮೇದಾರ್/ಕಚೇರಿ ಸಹಾಯಕ/ಕಾವಲುಗಾರ/ದಲಾಯತ್/ವಾಹನ ಪರಿಚಾರಕ/ಕ್ಲೀನರ್ ಸ್ವೀಪರ್ ಕಮ್ ಸ್ಕ್ಯಾವೆಂಜರ್) ಅಥವಾ ವಾಹನ ಚಾಲಕ. |

| | | | | |
|---|---|---|---|---|
| | | | ಲಭ್ಯವಿರದಿದ್ದಲ್ಲಿ ಆಗ ನೇರ ನೇಮಕಾತಿ ಮೂಲಕ<br><br>**ಮತ್ತು**<br><br>ನೇರ ನೇಮಕಾತಿ ಮೂಲಕ ಶೇಕಡಾ 50ರಷ್ಟು | **ನೇರ ನೇಮಕಾತಿಗಾಗಿ:-**<br>ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಹೊಂದಿರಬೇಕು. |
| 12. | **ದತ್ತಾಂಶ ನಮೂದು ಸಹಾಯಕ (ಡಾಟಾ ಎಂಟ್ರಿ ಅಸಿಸ್ಟೆಂಟ್)**<br>(ರೂ.21400-42000) | 12 | ಗ್ರೂಪ್ 'ಡಿ' ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ 25 ರಷ್ಟು<br><br>ಮುಂಬಡ್ತಿಗಾಗಿ ಸೂಕ್ತ ನೌಕರರು ಲಭ್ಯವಿಲದ್ದಿದ್ದಲ್ಲಿ, ನೇರ ನೇಮಕಾತಿ ಮೂಲಕ.<br>ಮತ್ತು<br><br>ನೇರ ನೇಮಕಾತಿ ಮೂಲಕ ಶೇಕಡಾ75 ರಷ್ಟು | **ಮುಂಬಡ್ತಿಗಾಗಿ:-**<br>ಎ) ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>ಬಿ) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳ (ಕೆಎಸ್ಇಇಬಿ)ರವರು ನಡೆಸುವ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಹಿರಿಯ ಶ್ರೇಣಿಯ ಬೆರಳಚ್ಚುಗಾರರ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.<br><br>**ನೇರ ನೇಮಕಾತಿಗಾಗಿ:-**<br>ಎ) ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು.<br><br>ಬಿ) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳ (ಕೆಎಸ್ಇಇಬಿ)ಯವರು ನಡೆಸುವ ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ಹಿರಿಯ ದರ್ಜೆಯ ಬೆರಳಚ್ಚುಗಾರರ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು. |

### ಭಾಗ – II ವರದಿಗಾರರ ವಿಭಾಗ

| ಕ್ರಮ ಸಂಖ್ಯೆ | ಪ್ರವರ್ಗ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಅವಶ್ಯಕ ವಿದ್ಯಾರ್ಹತೆ |
|---|---|---|---|---|
| 1. | **ಮುಖ್ಯ ಚರ್ಚಾ ಸಂಪಾದಕರು** (ರೂ.74400-109600) | 01 | ಚರ್ಚಾ ಸಂಪಾದಕರ ವೃಂದದಿಂದ ಮುಂಬಡ್ತಿ ಮೂಲಕ | **ಮುಂಬಡ್ತಿಗಾಗಿ:-** ಎ)ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು ಬಿ)ಚರ್ಚಾ ಸಂಪಾದಕರ ವೃಂದದಲ್ಲಿ 3 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 2. | **ಚರ್ಚಾ ಸಂಪಾದಕರು** (ರೂ.52650-97100) | 1+2=3 (2 ಹುದ್ದೆಗಳು ಸಹಾಯಕ ಚರ್ಚಾ ಸಂಪಾದಕ/ ಅಭಿಲೇಖನಾಧಿಕಾರಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಮೂಲಕ) | ಅಭಿಲೇಖನಾಧಿಕಾರಿ/ಸಹಾಯಕ ಚರ್ಚಾ ಸಂಪಾದಕರ ವೃಂದದಿಂದ ಮುಂಬಡ್ತಿ ಮೂಲಕ | ಎ)ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು.<br><br>ಬಿ)ಅಭಿಲೇಖನಾಧಿಕಾರಿ/ ಸಹಾಯಕ ಚರ್ಚಾ ಸಂಪಾದಕರ ವೃಂದದಲ್ಲಿ 5 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 3. | **ಸಹಾಯಕ ಚರ್ಚಾ ಸಂಪಾದಕ/ ಅಭಿಲೇಖನಾಧಿಕಾರಿ** (ರೂ.43100-83900) | 04+10=14 (10 ಹುದ್ದೆಗಳನ್ನು ವರದಿಗಾರರ ವೃಂದದಿಂದ ಮೇಲ್ದರ್ಜೆಗೇರಿಸುವ ಮೂಲಕ) | ವರದಿಗಾರರ ವೃಂದದಿಂದ ಮುಂಬಡ್ತಿ ಮೂಲಕ | ವರದಿಗಾರರ ವೃಂದದಲ್ಲಿ 5 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 4. | **ವರದಿಗಾರರು** (ರೂ.37900-70850) | 33-10=23 (10 ಹುದ್ದೆಗಳನ್ನು ಸಹಾಯಕ ಚರ್ಚಾ ಸಂಪಾದಕ/ ಅಭಿಲೇಖನಾಧಿಕಾರಿ ಹುದ್ದೆಯನ್ನು | ಶೀಘ್ರಲಿಪಿಗಾರರ ವೃಂದದಿಂದ ಮುಂಬಡ್ತಿ ಮೂಲಕ ಮುಂಬಡ್ತಿಗಾಗಿ ಸೂಕ್ತ ವ್ಯಕ್ತಿಗಳು ಲಭ್ಯವಿಲ್ಲದಿದ್ದಲ್ಲಿ ಆಗ ನೇರ ನೇಮಕಾತಿ ಮೂಲಕ | **ಮುಂಬಡ್ತಿ ಮತ್ತು ನೇರ ನೇಮಕಾತಿಗಾಗಿ:** **ಆಂಗ್ಲ ವರದಿಗಾರರು:** ಎ)ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು ಬಿ) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್ಇಇಬಿ) ಯವರು ನಡೆಸುವ ಇಂಗ್ಲಿಷ್ |

| | | | | |
|---|---|---|---|---|
| | | ಮೇಲ್ದರ್ಜೆಗೇರಿಸುವ ಮೂಲಕ | | ಶೀಘ್ರಲಿಪಿಯಲ್ಲಿ ಮತ್ತು ಇಂಗ್ಲಿಷ್ ಬೆರಳಚ್ಚಿನ ಪ್ರಾವೀಣ್ಯತೆ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು. ಹಿಂದಿ ಶೀಘ್ರಲಿಪಿಯಲ್ಲಿ ಪ್ರಾವೀಣ್ಯತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡುವುದು.<br><br>**ಕನ್ನಡ ವರದಿಗಾರರು:–**<br>ಎ)ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬೇಕು<br>ಬಿ) ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್‌ಇಇಬಿ) ಯವರು ನಡೆಸುವ ಕನ್ನಡ ಶೀಘ್ರಲಿಪಿಯಲ್ಲಿ ಮತ್ತು ಸೀನಿಯರ್ ಬೆರಳಚ್ಚಿನ ಪ್ರಾವೀಣ್ಯತೆ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರಬೇಕು.<br><br>ಹಿಂದಿ ಶೀಘ್ರಲಿಪಿಯಲ್ಲಿ ಪ್ರಾವೀಣ್ಯತೆ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡುವುದು. |

## ಭಾಗ – III ಗಣಕಯಂತ್ರ ವಿಭಾಗ

| ಕ್ರಮ ಸಂಖ್ಯೆ | ಪ್ರವರ್ಗ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಅವಶ್ಯಕ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 1 | **ಸಿಸ್ಟಂ ಮ್ಯಾನೇಜರ್** (ರೂ.82000-117700) | 01 | ಸಿಸ್ಟಂ ಅನಾಲಿಸ್ಟ್ ವೃಂದದಿಂದ ಮುಂಬಡ್ತಿ ಮೂಲಕ<br><br>ಮುಂಬಡ್ತಿಗಾಗಿ ಯಾರೇ ವ್ಯಕ್ತಿ ಲಭ್ಯವಿಲ್ಲದಿದ್ದಲ್ಲಿ, ಆಗ ರಾಜ್ಯದ ಯಾವುದೇ ಸಿವಿಲ್ ಸೇವೆಗಳ ತತ್ಸಮಾನವಾದ ವೃಂದದಿಂದ ನೌಕರರನ್ನು ಪ್ರತಿನಿಯೋಜಿಸುವ ಮೂಲಕ | **ಮುಂಬಡ್ತಿಗಾಗಿ:**<br>(1) ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫರ್ಮೆಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ನಿಯಮಿತ ಪದವಿಯನ್ನು ಹೊಂದಿರಬೇಕು.<br>(2) ಸಿಸ್ಟಂ ಅನಾಲಿಸ್ಟ್ ವೃಂದದಲ್ಲಿ ಎಂಟು ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 2 | **ಸಿಸ್ಟಂ ಅನಾಲಿಸ್ಟ್** (ರೂ.67550-104600) | 01 | ಸೀನಿಯರ್ ಪ್ರೋಗ್ರಾಮರ್ ವೃಂದದಿಂದ ಮುಂಬಡ್ತಿ ಮೂಲಕ,<br><br>ಮುಂಬಡ್ತಿಗಾಗಿ ಯಾರೇ ವ್ಯಕ್ತಿ ಲಭ್ಯವಿಲ್ಲದಿದ್ದಲ್ಲಿ, ರಾಜ್ಯದ ಯಾವುದೇ ಸಿವಿಲ್ ಸೇವೆಗಳಿಂದ ತತ್ಸಮಾನವಾದ ವೃಂದದಿಂದ ನೌಕರನ ನಿಯೋಜನೆಯ ಮೂಲಕ | **ಮುಂಬಡ್ತಿಗಾಗಿ:-**<br>ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫರ್ಮೆಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ನಿಯಮಿತ ಇಂಜಿನಿಯರಿಂಗ್ ಪದವಿಯನ್ನು ಪಡೆದಿರಬೇಕು.<br><br>ಸೀನಿಯರ್ ಪ್ರೋಗ್ರಾಮರ್ ವೃಂದದಲ್ಲಿ ಎಂಟು ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |

| | | | | |
|---|---|---|---|---|
| 3. | **ಸೀನಿಯರ್ ಪ್ರೋಗ್ರಾಮರ್** (ರೂ.52650-97100) | 02 | ಜೂನಿಯರ್ ಪ್ರೋಗ್ರಾಮರ್ ವೃಂದದಿಂದ ಮುಂಬಡ್ತಿಯ ಮೂಲಕ ಶೇಕಡಾ 50ರಷ್ಟು ಮತ್ತು ನೇರ ನೇಮಕಾತಿ ಮೂಲಕ ಶೇಕಡಾ 50 ರಷ್ಟು<br><br>ಪರಂತು, ಮುಂಬಡ್ತಿಗಾಗಿ ಯಾರೇ ವ್ಯಕ್ತಿ ಲಭ್ಯವಿಲ್ಲದಿದ್ದಲ್ಲಿ, ಇ-ಆಡಳಿತ ಇಲಾಖೆಯಿಂದ ಅಥವಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಅಥವಾ ಇತರೆ ಯಾವುದೇ ಇಲಾಖೆ ಅಥವಾ ಕರ್ನಾಟಕ ವಿಧಾನ ಸಭೆ ಸಚಿವಾಲಯದಿಂದ ತತ್ಸಮಾನ ವೃಂದದ ಅಧಿಕಾರಿಯನ್ನು ಪ್ರತಿನಿಯೋಜನೆಯ ಮೂಲಕ | **ನೇರ ನೇಮಕಾತಿಗಾಗಿ:-**<br>ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ನಿಯಮಿತ ಪದವಿಯನ್ನು ಪಡೆದಿರಬೇಕು.<br>**ಮುಂಬಡ್ತಿಗಾಗಿ:**<br>1.ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾನಿಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ಪದವಿ ಪಡೆದಿರಬೇಕು.<br>2. ಜೂನಿಯರ್ ಪ್ರೋಗ್ರಾಮರ್ ವೃಂದದಲ್ಲಿ ಎಂಟು ವರ್ಷಗಳಗಿಂತ ಕಡಿಮೆಯಿಲ್ಲದ ಸೇವೆ ಸಲ್ಲಿಸಿರಬೇಕು. |
| 4. | **ಜೂನಿಯರ್ ಪ್ರೋಗ್ರಾಮರ್** (ರೂ.43100-83900) | 02 | ಶೇಕಡಾ 50 ರಷ್ಟು ಜೂನಿಯರ್ ಕನ್ಸೂಲ್ ಆಪರೇಟರ್ ವೃಂದದಿಂದ ಮುಂಬಡ್ತಿಯ ಮೂಲಕ ಮತ್ತು ನೇರ ನೇಮಕಾತಿಯ ಮೂಲಕ ಶೇಕಡಾ 50ರಷ್ಟು,<br><br>ಪರಂತು, ಮುಂಬಡ್ತಿಗಾಗಿ ಯಾರೇ ವ್ಯಕ್ತಿ ಲಭ್ಯವಿಲ್ಲದ್ದಲ್ಲಿ, ಆಗ ಇ-ಆಡಳಿತ ಇಲಾಖೆಯಿಂದ ಅಥವಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಅಥವಾ ಇತರೆ ಯಾವುದೇ ಇಲಾಖೆಯಿಂದ ತತ್ಸಮಾನ ವೃಂದದ ಅಧಿಕಾರಿಯನ್ನು ಪ್ರತಿನಿಯೋಜನೆಯ ಮೂಲಕ | **ನೇರ ನೇಮಕಾತಿಗಾಗಿ:-**<br>ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಜಿನಿಯರಿಂಗ್ ಪದವಿಯನ್ನು ಪಡೆದಿರಬೇಕು.<br>**ಮುಂಬಡ್ತಿಗಾಗಿ:**<br>1)ಕಾನೂನು ರೀತ್ಯಾ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ ಅಥವಾ ಇನ್ಫರ್ಮೇಷನ್ ಸೈನ್ಸ್ ಅಥವಾ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ |

| | | | | |
|---|---|---|---|---|
| | | | | ವಿಷಯದಲ್ಲಿ ಇಂಜಿನಿಯರಿಂಗ್ ಪದವಿಯನ್ನು ಪಡೆದಿರಬೇಕು.<br>2) ಜೂನಿಯರ್ ಕನ್ಸೋಲ್ ಆಪರೇಟರ್ ವೃಂದದಲ್ಲಿ 08 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 5. | **ಜೂನಿಯರ್ ಕನ್ಸೋಲ್ ಆಪರೇಟರ್**<br>(ರೂ.37900-70850) | 04 | ಕಂಪ್ಯೂಟರ್ ಆಪರೇಟರ್ ವೃಂದದಿಂದ ಮುಂಬಡ್ತಿ ಮೂಲಕ ಶೇಕಡಾ 50% ರಷ್ಟು ಮತ್ತು ನೇರ ನೇಮಕಾತಿ ಮೂಲಕ ಶೇಕಡಾ 50ರಷ್ಟು<br>ಪರಂತು, ಮುಂಬಡ್ತಿಗಾಗಿ ಸೂಕ್ತ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ನೇರ ನೇಮಕಾತಿ ಮೂಲಕ | **ನೇರ ನೇಮಕಾತಿಗಾಗಿ:**<br>ಕಾನೂನಿನ ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಅಥವಾ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ಇಂಜಿನಿಯರಿಂಗ್ ಪದವಿಯನ್ನು ಹೊಂದಿರಬೇಕು.<br>**ಮುಂಬಡ್ತಿಗಾಗಿ:-**<br>1.ಕಾನೂನಿನ ರೀತ್ಯಾ ಸ್ಥಾಪಿತವಾದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿಯನ್ನು ಹೊಂದಿರಬೇಕು.<br>2.ಕಂಪ್ಯೂಟರ್ ಆಪರೇಟರ್ ಆಗಿ 8 ವರ್ಷಗಳಿಗಿಂತ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 6. | **ಕಂಪ್ಯೂಟರ್ ಆಪರೇಟರ್**<br>(ರೂ.30350-58250) | 04 | ನೇರ ನೇಮಕಾತಿ ಮೂಲಕ. | **ನೇರ ನೇಮಕಾತಿಗಾಗಿ:-**<br>ಎ) ಕಂಪ್ಯೂಟರ್ ಅಪ್ಲಿಕೇಶನ್ (ಬಿಸಿಎ) ಅಥವಾ ಕಂಪ್ಯೂಟರ್ ಸೈನ್ಸ್‌ನಲ್ಲಿ ಬಿಎಸ್ಸಿ., ಅಥವಾ ಎಲೆಕ್ಟ್ರಾನಿಕ್ಸ್ ಪದವಿಯನ್ನು ಹೊಂದಿರಬೇಕು. |

## ಭಾಗ – IV ಇತರೆ ವೃಂದಗಳು

| ಕ್ರಮ ಸಂಖ್ಯೆ | ಪ್ರವರ್ಗ | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಅವಶ್ಯಕ ವಿದ್ಯಾರ್ಹತೆ |
|---|---|---|---|---|
| 1 | **ಹಿರಿಯ ವಾಹನ ಚಾಲಕರು** (ರೂ.27650-52650) | 07 | ಚಾಲಕ ವೃಂದದಿಂದ ಮುಂಬಡ್ತಿ ಮೂಲಕ | **ಮುಂಬಡ್ತಿಗಾಗಿ:-**<br>ಚಾಲಕ ವೃಂದದಲ್ಲಿ 10 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 2 | **ವಾಹನ ಚಾಲಕರು** (ರೂ.21400-42000) | 27 | ಎ) ನೇರ ನೇಮಕಾತಿ ಮೂಲಕ ಶೇಕಡಾ 50 ರಷ್ಟು<br>ಬಿ) ಯಾವುದೇ 'ಡಿ' ಗುಂಪಿನ ವೃಂದದಿಂದ ಮುಂಬಡ್ತಿ ಮೂಲಕ ಶೇ.50ರಷ್ಟು ಮುಂಬಡ್ತಿಗಾಗಿ ಸೂಕ್ತ ಅಭ್ಯರ್ಥಿಯು ಲಭ್ಯವಿಲ್ಲದಿದ್ದಲ್ಲಿ ಆಗ ನೇರ ನೇಮಕಾತಿ ಮೂಲಕ | **ನೇರ ನೇಮಕಾತಿಗಾಗಿ:-**<br>ಎ)ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು ಮತ್ತು ಪ್ರಥಮ ಚಿಕಿತ್ಸೆಯ ಪ್ರಮಾಣಪತ್ರವನ್ನು ಹೊಂದಿರಬೇಕು.<br>ಬಿ)ಮೋಟಾರು ಕಾರು/ಭಾರಿ ವಾಹನಗಳ ಚಾಲನೆಯ ಅಧಿಕೃತ ಚಾಲನಾ ಪರವಾನಗಿಯನ್ನು ಹೊಂದಿರಬೇಕು.<br>ಸಿ)ಮೋಟಾರು ಕಾರುಗಳ ಚಾಲನೆಯಲ್ಲಿ ಮೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಪ್ರಾಯೋಗಿಕ ಅನುಭವವನ್ನು ಹೊಂದಿರಬೇಕು.<br>**ಮುಂಬಡ್ತಿಗಾಗಿ:-**<br>ಎ)ಮೋಟಾರು ವಾಹನ ಚಾಲನಾ ಪರವಾನಗಿಯನ್ನು ಹೊಂದಿರಬೇಕು.<br>ಬಿ)'ಡಿ' ಗುಂಪಿನ ನೌಕರನಾಗಿ 5 ವರ್ಷಗಳಿಗೆ ಕಡಿಮೆಯಿಲ್ಲದಂತೆ ಸೇವೆಯನ್ನು ಸಲ್ಲಿಸಿರಬೇಕು. |
| 3. | **ಜಮೇದಾರ್** (ರೂ.19950-37900) | 22 | ಕಚೇರಿ ಸಹಾಯಕ/ಕಾವಲುಗಾರ/ ದಲಾಯತ್/ ವಾಹನ ಪರಿಚಾರಕರು/ ಕ್ಲೀನರ್- ಸ್ವೀಪರ್-ಕಂ-ಸ್ಕ್ಯಾವೆಂಜರ್ ವೃಂದದಿಂದ ಮುಂಬಡ್ತಿ ಮೂಲಕ. (ಗ್ರೂಪ್ ಡಿ) | |

| | | | | |
|---|---|---|---|---|
| 4 | **ಹಿರಿಯ ಬಡಗಿ**<br>(ರೂ.21400-42000) | 01 | ಬಡಗಿ ವೃಂದದಿಂದ ಮುಂಬಡ್ತಿ ಮೂಲಕ | |
| 5 | **ಬಡಗಿ**<br>(ರೂ.18600-32600) | 02 | ನೇರ ನೇಮಕಾತಿ ಮೂಲಕ. | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆ ಮತ್ತು ಅಂಗೀಕೃತ ಸಂಸ್ಥೆಯ ಕಾರ್ಪೆಂಟರ್ ಕೋರ್ಸ್‌ನಲ್ಲಿ ತೇರ್ಗಡೆಯಾಗಿರಬೇಕು ಅಥವಾ ಜಿಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು. |
| 6 | **ಕಚೇರಿ ಸಹಾಯಕ/ದಲಾಯತ್/ ಕಾವಲುಗಾರ/ವಾಹನ ಪರಿಚಾರಕ/ಕ್ಲೀನರ್ ಸ್ವೀಪರ್ ಕಂ ಸ್ಕ್ಯಾವೆಂಜರ್ (ಗ್ರೂಪ್-ಡಿ)**<br>(ರೂ.17000-28950) | 62 | ನೇರ ನೇಮಕಾತಿ ಮೂಲಕ. | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರಬೇಕು. |

**ಸೂಚನೆ:- ಪದವಿ ಎಂದರೆ, 10+2+3 ಮಾದರಿಯಲ್ಲಿ ಪಡೆದ ಪದವಿಯಾಗಿರುತ್ತದೆ.**

**ಅನುಸೂಚಿ – V**

**ಪ್ರತಿನಿಯೋಜನೆಯ ಹುದ್ದೆಗಳು**

| **ಕ್ರಮ ಸಂಖ್ಯೆ** | **ಪ್ರವರ್ಗ** | **ಹುದ್ದೆಗಳ ಸಂಖ್ಯೆ** | **ನೇಮಕಾತಿ ವಿಧಾನ** | **ಅವಶ್ಯಕ ವಿದ್ಯಾರ್ಹತೆ** |
|---|---|---|---|---|
| 1 | ಅಧೀನ ಕಾರ್ಯದರ್ಶಿ (ಭಾಷಾಂತರ) | 01 | ಭಾಷಾಂತರ ನಿರ್ದೇಶನಾಲಯದಿಂದ ಅಧಿಕಾರಿಯನ್ನು ಅಥವಾ ವಿಶ್ವವಿದ್ಯಾನಿಲಯದಿಂದ ತತ್ಸಮಾನ ದರ್ಜೆಯನ್ನು ಹೊಂದಿರುವ ಅಧಿಕಾರಿಯನ್ನು ಪ್ರತಿನಿಯೋಜನೆಯ ಮೂಲಕ | |
| 2 | ಮಾರ್ಷಲ್ | 01 | ಪೊಲೀಸ್ ಇಲಾಖೆಯಿಂದ ಪೊಲೀಸ್ ಉಪ ಅಧೀಕ್ಷಕರನ್ನು ನಿಯೋಜನೆಯ ಮೂಲಕ | |
| 3 | ಶಾಖಾಧಿಕಾರಿ (ಭಾಷಾಂತರ) | 01 | ಭಾಷಾಂತರ ನಿರ್ದೇಶನಾಲಯ ತತ್ಸಮಾನ ದರ್ಜೆಯ ವೃಂದದಿಂದ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ | |
| 4 | ಆರ್ಥಿಕ ಅಧಿಕಾರಿ | 01 | ಮಹಾಲೇಖಪಾಲಕ ಕಚೇರಿಯಿಂದ ಒಬ್ಬ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ | |
| 5 | ಭಾಷಾಂತರಕಾರರು | 03 | ಭಾಷಾಂತರ ನಿರ್ದೇಶನಾಲಯದಿಂದ ತತ್ಸಮಾನ ವೃಂದದ ಭಾಷಾಂತರಕಾರರನ್ನು ಪ್ರತಿನಿಯೋಜಿಸುವ ಮೂಲಕ | |

**ಸಭಾಪತಿಯವರ ಆದೇಶಾನುಸಾರ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

## ಅನುಸೂಚಿ – III

### (ನಿಯಮ 12ನ್ನು ನೋಡಿ)

| ಹುದ್ದೆಗಳ ಪ್ರವರ್ಗ | ನೇಮಕಾತಿ ಮಾಡಲು ಅಧಿಕಾರ ಹೊಂದಿದ ಪ್ರಾಧಿಕಾರ | ವಿಧಿಸಬಹುದಾದ ದಂಡಗಳನ್ನು ವಿಧಿಸಬಹುದಾದ ಅಧಿಕಾರವಿರುವ ಪ್ರಾಧಿಕಾರ | | ಮೇಲ್ಮನವಿ ಪ್ರಾಧಿಕಾರ |
|---|---|---|---|---|
| | | ಪ್ರಾಧಿಕಾರ | ದಂಡಗಳು | |
| 1 | 2 | 3 | 4 | 5 |
| ಕಾರ್ಯದರ್ಶಿ<br>ಅಪರ ಕಾರ್ಯದರ್ಶಿ<br>ಜಂಟಿ ಕಾರ್ಯದರ್ಶಿ | ವಿಶೇಷ ಮಂಡಳಿ | ಸಭಾಪತಿ | (ii) ರಿಂದ (iv-ಎ) | ವಿಶೇಷ ಮಂಡಳಿ |
| | | ವಿಶೇಷ ಮಂಡಳಿ | (v) ರಿಂದ viii) | ರಾಜ್ಯಪಾಲರು |
| ಇತರೆ ಎಲ್ಲಾ ವೃಂದಗಳ ಅಧಿಕಾರಿ ಮತ್ತು ಉದ್ಯೋಗಿಗಳು | ಸಭಾಪತಿ | ಸಭಾಪತಿ | (i) ರಿಂದ (viii) | ವಿಶೇಷ ಮಂಡಳಿ |